International Journal of Kannada Research 2016; 2(1): 13-15




International Journal of Kannada Research
www.kannadajournal.com

**ISSN: 2454–5813**
IJSR 2016; 2(1): 13-15
© 2016 IJKS
www.kannadajournal.com
Received: 04-11-2015
Accepted: 05-12-2015

**Dr. Neelambika Policepatil (Sherikar)**
Principal & Research Guide, Godutai Doddappa Appa Degree College For Women, S.B.Temple Road, Brahampur, Kalaburagi, Karnataka-585103.

**Correspondence**
**Dr. Neelambika Policepatil (Sherikar)**
Principal & Research Guide, Godutai Doddappa Appa Degree College For Women, S.B.Temple Road, Brahampur, Kalaburagi, Karnataka-585103.

# ಮಡಿವಾಳ ಮಾಚಿದೇವರ ಹೊಂಡ, ಗುಡಿ ಮತ್ತು ಅಂಬಲಿಕುಂಡ

**Dr. Neelambika Policepatil (Sherikar)**

ಮಾಚಿದೇವರ ಕಾಯಕದ ಸ್ಥಳಕ್ಕೆ ಮಡಿವಾಳ ಮಾಚಿದೇವರ ಹೊಂಡವೆಂದು ಅದಕ್ಕೆ ಸ್ವಲ್ಪ ದೂರದಲ್ಲಿ ಅಂದರೆ ಬಸವಕಲ್ಯಾಣ ಮತ್ತು ಪ್ರತಾಪಪುರ ರಸ್ತೆಯ ಮೇಲೆ ಅವರ ಹೆಸರಿನ ದೇವಾಲಯವನ್ನು ಕಾಣಬಹುದಾಗಿದೆ.
ಮಾಚಿದೇವರು ತಮ್ಮ ಕಾಯಕವನ್ನು ಇಲ್ಲಿಯೇ ಮಾಡುತ್ತಿದ್ದರೆಂದು ಅನೇಕ ಕಾವ್ಯಗಳಲ್ಲಿ ಉಲ್ಲೇಖ ದೊರೆಯುತ್ತದೆ.

ತಂದು ಭಕ್ತರ ಮಾಸಿದಂಬರ
ವೃಂದಮಂ ಪೊರೆಗಟ್ಟಿ ಪೊತ್ತರ
ವಿಂದಡಿತನುದಯಕ್ಕೆ ಮುನ್ನವೆ ಹೋಗಿ ತಾ ಬೇರೆ
ಒಂದು ಹೊಳೆಯ ಮಾಡಿಯೋಗದೊಗೆ
ದೊಂದನೊಂದ ಹರಡಿ ಗಳಿಗೆಯ
ನೊಂದಿಸುತ್ತಾ ಮಡಿಗಳಂ ತೆಗೆದೊಟ್ಟಿ ಮಿಗೆ ಬಿಗಿದು ೪೩

ಶಿವಶರಣರ ಮಾಸಿದ ಬಟ್ಟೆಯನ್ನು ತೆಗೆದುಕೊಂಡು ತಾನೊಬ್ಬನೆ ಬೇರೆ ಒಂದು ಹೊಳೆಗೆ ಹೋಗಿ ಭಕ್ತಿಯಿಂದ ಅವುಗಳನ್ನು ಒಗೆದು, ಒಂದೊಂದು ಬಟ್ಟೆಯನ್ನು ಒಣಗಿಸಿ ಗಳಿಗೆಯನ್ನು ಮಾಡಿ ಮಡಿಮಾಡಿ ಶರಣರ ಮನೆಗೆ ಒಯ್ದು ಮುಟ್ಟಿಸುವಾಗ ಅವನು ಮಾಡಿದ ವೀರನಾದ ಎಂತಹದು ! ಕೇಳಿದರೆ ಭವಿಗಳಿಗೆ ಭಯ ಹುಟ್ಟಿಸುವಂತಹದು "ರಜತಾದ್ರಿಯಂತದಿ ನಡೆಯುತ್ತ" – ಎಂದು ವರ್ಣಿಸುತ್ತಾ ಭೀಮಕವಿ ಅದನ್ನು ಹೀಗೆ ವರ್ಣಿಸುತ್ತಾನೆ.

ಜಡರುಗಳಿರಾ ತೊಲಗಿಬೋ ಎನು
ತಡಿಗಡಿಗೆ ಜಯ ಘಂಟೆಯನು ಹೊಯಿ
ದೆಡೆಗೆಡೆಗೆ ಸಾರುತ್ತ ಶರಣನು ಮಠಕ್ಕೆ ನಡೆತಂದು
ಮಡಿಗಳಂ ಒಡೆಯರು ಬಂದು ಬೇಡಲು ಕೊಡುವೆನುಚಿತಹ" ೪೩

ಮಡಿವಾಳ ಮಾಚಿದೇವರು ಹಲವಾರು ಪವಾಡಗಳನ್ನು ಕೂಡಾ ಕಲ್ಯಾಣದಲ್ಲಿ ಮಾಡಿದಂತೆ ಕಾವ್ಯಗಳಲ್ಲಿ ಸುಳುಹು ಸಿಗುತ್ತದೆ.
ಶುಭ್ರವಾದ ಬಟ್ಟೆಗಳನ್ನು ಧರಿಸಿದಬಸವಣ್ಣನವರ ವಸ್ತ್ರಗಳನ್ನು ನೋಡಿ ಬಿಜ್ಜಳನು ಅಗಸನಾರೆಂದು ಕೇಳಲು ಆ ಅಗಸನಿಂದ ಬಟ್ಟೆ ಒಗೆಸಲು ಅರಸ ಉತ್ಸುಕನಾದಾಗ, ಬಸವಣ್ಣ ಬೇಡವೆಂದರೂ ತನ್ನ ಬಟ್ಟೆಗಳನ್ನು ಕೊಟ್ಟು ಕಳುಹಿಸುತ್ತಾನೆ. ಮಡಿವಾಳಯ್ಯನು ಕೋಪದಿಂದ ನೋಡಲು ಅವೆಲ್ಲ ಉರಿದು ಹೋದವು. ಇಂತಹ ಅನೇಕ ಪವಾಡಗಳನ್ನು ಆತ ಕಲ್ಯಾಣದಲ್ಲಿ ಮಾಡಿದಂತೆ ಕಾವ್ಯಗಳು ನಿರೂಪಿಸುತ್ತವೆ.
ಇವೆಲ್ಲಕ್ಕೂ ಮಿಗಿಲಾಗಿ ಜಾನಪದರು ಆತನ ವ್ಯಕ್ತಿತ್ವವನ್ನು ವರ್ಣಿಸುತ್ತಾರೆ. ಅರಸನ ಬಟ್ಟೆಯನ್ನು ಉರಿದುಹೋದಮೇಲೆ ಬಿಜ್ಜಳ ಸಿಟ್ಟಿಗೆದ್ದು, ಕೆರೆ, ಹಳ್ಳ, ಬಾವಿಗಳಲ್ಲಿ ಕಾವಲು ಇರಿಸಿ ಎಲ್ಲಿಯೂ ಮಾಚಯ್ಯನಿಗೆ ಶರಣರ ವಸ್ತ್ರಗಳನ್ನು ಮಡಿ ಮಾಡುವುದಕ್ಕೆ ಬಿಡುವುದಿಲ್ಲ. ಆಗ ಮಾಚಯ್ಯ,

'ಮಡದಿಗಿ ಕರಕೊಂಡು ಕಡು ಭಕ್ತ ಮಾಚಯ್ಯ
ಬಿಡದೆ ತಿರುಗಿದನು ಕೆರೆ ತೊರೆಯ ಕಾವಲವು
ನಡೆದಿತು ಎಲ್ಲಿ ಹೋದಲ್ಲಿ"

ಹೊತ್ತು ಮುಳುಗಲು ಬಂತು. ಶರಣರ ಕಾಯಕ ನಿಲ್ಲುವಂತೆ ಕಾಣಹತ್ತಿತು. ಏನು ಮಾಡಲಿ ಮಾಚಯ್ಯನವರಿಗೆ ಏನೂ ತಿಳಿಯದಾದಾಗ ಮಡದಿ ಮಲ್ಲಿಗೆಮ್ಮ ಬಂದು 'ನನ್ನ ಎದೆಯನ್ನು ಇರಿದು ಬರುವ ಕೆನ್ನೀರಿನಲ್ಲಿ ಶರಣರ ವಸ್ತ್ರವನ್ನು ಮಡಿಮಾಡಿರಿ' ಎಂದು ಹೇಳಿದಾಗ ಸಂತೋಷಪಟ್ಟ ಮಾಚಯ್ಯ ಹೆಮ್ಮಯಿಂದ ಮಡದಿಯನ್ನು ನೋಡಿ

'ಹಡದಿ ಹಾಸಿದ ಮಾಚ ಮಡದಿಯನೆ ಇರಿದ
ಒಡನೆ ಬಲು ಚಿಮ್ಮಿ ಬಿಸಿರಗುತ/ಹೊಳೆಯಾಗಿ
ನಡುಗಟ್ಟಿ ನೀರು ಕೆರೆಯಾಯ್ತು.

ಗಂಡನ ಪವಿತ್ರ ಕಾಯಕಕ್ಕೆ ಹರಿದ ಆರಕ್ತದ ಸ್ಥಳವೇ ಪವಿತ್ರ ಹೊಂಡವಾಯಿತ್ತು ಎನ್ನುತ್ತಾರೆ ಜನಪದರು.

'ಹಡದಿ ಹಾಸಿದ ಸ್ಥಳವು ಮಡದಿಯಾ ನೆತ್ತರವು
ಮಡವು ಮಾಚಯ್ಯನ ಕೆರೆಯೊಂದು–ಕಲ್ಯಾಣ
ಪಡವಣಕ್ಕೆ ಇಂದು ಮೆರೆಯುವದು.

ಇಂದಿಗೂ ಅ ಸ್ಥಳಕ್ಕೆ 'ಮಾಚಯ್ಯನ ಹೊಂಡ' – ವೆಂದೇ ಕರೆಯುತ್ತಾರೆ. ಹೊಂಡದ ಮೇಲೆ ಒಂದು ಗುಡಿಯನ್ನು ಕಟ್ಟಿ ಅದರಲ್ಲಿ ಶಿವಲಿಂಗವೊಂದನ್ನು ಇಟ್ಟಿದ್ದಾರೆ. ಮಡಿವಾಳ ಮಾಚಿದೇವರ ಇಷ್ಟಲಿಂಗ ಪೂಜೆ ಮತ್ತು ಧ್ಯಾನಗಳೆಲ್ಲಾ ಇಲ್ಲಿಯೇ ನಡೆಯುತ್ತಿದ್ದವೆಂಬುದರ ಪ್ರತೀಕವಾಗಿ ಆ ಮಂದಿರವನ್ನು ನಿರ್ಮಿಸಲಾಗಿದೆ.
ಈ ಹೊಂಡಕ್ಕೆ ಸ್ವಲ್ಪ ದೂರದಲ್ಲಿ ಇನ್ನೊಂದು ಗುಡಿಯಿದ್ದು ಅದಕ್ಕೂ ಮಾಚಿದೇವರ ಗುಡಿಯೆಂದೇ ಕರೆಯುತ್ತಾರೆ. ಆ ಸ್ಥಳದಲ್ಲಿ ಮಾಚಯ್ಯ ಜನರೊಡನೆ ಶಿವಾನುಭವ ಗೋಷ್ಠಿಗಳನ್ನು ನಡೆಸುತ್ತಿದ್ದರೆಂದು ಹೇಳಲಾಗುತ್ತದೆ. ಮಡಿವಾಳ ಮಾಚಿದೇವರು ಶ್ರೇಷ್ಠ ವಚನಕಾರರು, ಅನುಭಾವಿಗಳು ಆಗಿದ್ದರು.

**ಅಂಬಲಿಕುಂಡ**

ಬಸವಕಲ್ಯಾಣದಿಂದ ೨೦ ಕೀ.ಮೀ. ಅಂತರದಲ್ಲಿ ಈ ಅಂಬಲಿ ಕುಂಡವಿದೆ. ಮುಂಬಯಿ ಹೈದ್ರಾಬಾದ್ ರಾಷ್ಟ್ರಿಯ ಹೆದ್ದಾರಿ ಒಂಬತ್ತರ ಮೇಲಿರುವ ಚಂಡಕಾಪೂರ ಎಂಬ ಗ್ರಾಮದ ಸಮೀಪದಲ್ಲಿದೆ. ಶಿವಶರಣ ಮಾದಾರಚೆನ್ನಯ್ಯನವರಿಗೆ ಈ ಸ್ಥಳವು ಸಂಬಂಧಪಟ್ಟದ್ದಾಗಿದೆ.
ಬಸವಾದಿ ಶಿವಶರಣರಲ್ಲಿ ಹಿರಿಯರೂ ಎಲ್ಲರಿಗೂ ಪೂಜ್ಯರು ಆದವರು ಮಾದರ ಚನ್ನಯ್ಯನವರು. ಬಸವಣ್ಣನವರಂತೂ ಚನ್ನಯ್ಯನವರನ್ನು ಅಪ್ಪನೆಂದು ಕರೆದು ಸಂತೋಷ ಪಡುತ್ತಾರೆ. ತಮ್ಮ ವಚನಗಳಲ್ಲಿ ೨೬, ೨೭ ಸಲ ಚನ್ನಯ್ಯನವರನ್ನು ಸ್ಮರಿಸುತ್ತಾರೆ. "ನಮ್ಮ ಕೂಡಲಸಂಗನ ಮಹಾಮನೆಯಲ್ಲಿ ಮಾದಾರ ಚನ್ನಯ್ಯ ಹೊಲಬಿಗನಯ್ಯ" ಕೂಡಲ ಸಂಗನ ಶರಣರಲ್ಲಿ ಅಂಬಲಿಯ ನೇಮದಾತ ಮಾದಾರ ಚನ್ನಯ್ಯ"; "ಮಾದಾರ ಚನ್ನಯ್ಯ ಮನ್ನಿಸನು"; ಮಾದಾರ ಚನ್ನಯ್ಯನ ಮನೆಯಲ್ಲಿ ಬೇಡಿದೆ" "ಅಯ್ಯಗಳಯ್ಯ ನಮ್ಮ ಮಾದಾರ ಚನ್ನಯ್ಯ".
ಈ ಕೆಲವು ವಚನಗಳ ಸಾಲುಗಳಿಂದ ಚನ್ನಯ್ಯನವರು ಕಲ್ಯಾಣದಲ್ಲಿ ಇದ್ದಂತೆಯೂ, ಶರಣರ ಅವರನ್ನು ಕಂಡಂತೆ ಸ್ಪಷ್ಟವಾದ ಸೂಚನೆಗಳು ಕಂಡು ಬರುತ್ತವೆ.

ಚನ್ನಯ್ಯನವರ ಕಾಂಚಿ ಪಟ್ಟಣದ ಕಾಯಕ ಜೀವನವನ್ನು ವರ್ಣಿಸುವ ಕಾವ್ಯಗಳು ಕಲ್ಯಾಣ ಪಟ್ಟಣದ ಕಾಯಕ ಬದುಕನ್ನು ವರ್ಣಿಸುವದಿಲ್ಲ. ಕಾವ್ಯಗಳಲ್ಲಿ ಅದರ ಬಗ್ಗೆ ವಿವರಗಳು ಸಿಗುವುದಿಲ್ಲವೆಂದರೆ ಅವರು ಕಲ್ಯಾಣಕ್ಕೆ ಬಂದಿಲ್ಲವೆಂಬರ್ಥವಲ್ಲ. ಆ ಭಾಗದಲ್ಲಿ ಆ ಶರಣರನ್ನು ಕುರಿತು ಸಿಗುವ ಐತಿಹ್ಯಗಳು, ಕೆಲವು ಜಾನಪದ ಹಾಡುಗಳಿಂದ ಕಲ್ಯಾಣದಲ್ಲಿದ್ದ ಮಾದಾರ ಚನ್ನಯ್ಯನವರ ಜೀವನವನ್ನು ತಿಳಿದು ಕೊಳ್ಳಬಹುದು.
ಮೂಲತ: ಕನ್ನಡನಾಡಿನವರಾಗಿದ್ದ ಈ ಶರಣರು ಯಾವುದೋ ರಾಜಕೀಯ ಏರಿಳಿತದಿಂದಾಗಿ ತಮಿಳುನಾಡಿನ ಕಂಚಿ ಪಟ್ಟಣಕ್ಕೆ ಹೋಗಿ ಅಲ್ಲಿಯ ಅರಸ ಕರಿಕಾಲನ ಅಶ್ವಾಲಯಕ್ಕೆ ಹುಲ್ಲು ಹಾಕುವ ಕಾಯಕವನು ಮಾಡುತ್ತಾ ಗುಪ್ತ ಭಕ್ತಿಯಿಂದ ಮಹಾದೇವನನ್ನು ಅರ್ಚಿಸುತ್ತಾ ಮಡದಿ ಗಂಗಮ್ಮನೊಂದಿಗೆ ಸುಖಿಯಾಗಿದ್ದ.
ಭಕ್ತಿಯಿಂದ ಮಡದಿ ಮಾಡಿಕೊಟ್ಟ ಅಂಬಲಿಯನ್ನು ಪರ ಶಿವನಿಗೆ ಅರ್ಪಿಸುತ್ತಿದ್ದ. ಈ ಆಂಬಲಿಯ ಮಹಿಮೆಯಿಂದ ಆತ ಅಲ್ಲಿಯ ಅರಸ ಕರಿಕಾಲಚೋಳನಿಂದ ನಮಸ್ಕರಿಸಿಕೊಂಡಿದ್ದು ಕಾವ್ಯಗಳಲ್ಲಿ ಸುಂದರವಾಗಿ ವರ್ಣಿಸಲ್ಪಟ್ಟಿದೆ.
ಅಲ್ಲಿ ನಡೆದ ಅಂಬಲಿ ಮಹಿಮೆಯ ಪ್ರಸಂಗ ಕಲ್ಯಾಣದ ಬಸವಾದಿ ಪ್ರಮಥರ ಕಿವಿಗೂ ಬಿತ್ತು.ತಡಮಾಡಲಿಲ್ಲ ಬಸವಣ್ಣನವರು ಕಂಚಿ ಪಟ್ಟಣಕ್ಕೆ ಹೋಗಿ ಇಳಿ ವಯಸ್ಸಿನವರಾದ ಚನ್ನಯ್ಯನವರನ್ನು ಕರೆದುಕೊಂಡು ಕಲ್ಯಾಣಕ್ಕೆ ಬರುತ್ತಾರೆ.
ಕಲ್ಯಾಣಕ್ಕೆ ಬಂದ ಶರಣರು ಕಾಯಕವೊಂದನ್ನು ಅವಲಂಬಿಸಿ ಅದರಿಂದ ಅಂಬಲಿ ದಾಸೋಹವನ್ನು ಮಾಡುತ್ತಾ, ನಸರ್ಗದ ಈ ಪ್ರಶಾಂತವಾದ ಸ್ಥಳದಲ್ಲಿ ಉಳಿಯುತ್ತಾರೆ. ಕಾಂಚಿ ಪಟ್ಟಣದಲ್ಲಿ ನಡೆದಂತಹ ಒಂದು ಘಟನೆ ಇಲ್ಲಿಯೂ ನಡೆಯುತ್ತದೆ. ಕಲ್ಯಾಣದ ಭಾಗದಲ್ಲಿ ಲಭ್ಯವಾಗುವ ಜಾನಪದ ಹಾಡುಗಳು ಇದರ ಮೇಲೆ ವಿಶೇಷ ಬೆಳಕನ್ನು ಚೆಲುತ್ತದೆ.

ಚನ್ನಯ್ಯನವರ ಮಡದಿ ಗಂಗಮ್ಮ ಕಲ್ಯಾಣದಲ್ಲಿ
ಮೂರು ಕಾಲಿನ ಒಲಿಹಾಕಿ ಗಡಗಿಯುಮ್ಯಾಲಿಟ್ಟು
ಪರಶಿವ ನೆನಸಿ ಅಂಬಲಿ । ಮಾಡಿದರ
ಪರಮಾತ್ಮ ಬಂದ ಸವಿಲಾಕ॥

ಒಂದು ದಿನ ಪತಿ ಪತ್ನಿಯರಿಬ್ಬರು ಭಕ್ತಿಯಿಂದ ಶರಣರೆಲ್ಲರನ್ನು ತಮ್ಮ ಮನೆಗೆ ಪ್ರಸಾದಕ್ಕೆ ಕರೆಯುತ್ತಾರೆ. ಶರಣರು ಸಹ ಅಷ್ಟೇ ಗೌರವದಿಂದ ಚನ್ನಯ್ಯನವರ ಮಠಕ್ಹೋಗಿ ಭಕ್ತಿಯಿಂದ ಅಂಬಲಿಯನ್ನು ಪ್ರಸಾದವಾಗಿ ಪಡೆಯುತ್ತಾರೆ.

ಶರಣರ ಕುಲವೆಲ್ಲಾ ಚನ್ನಯ್ಯನ ಮಠಕ್ಹೋಗಿ
ಅರತಿಲಿ ಅಂಬಲಿ ಕುಡಿತಾರ । ಶರಣರು
ಅಂಬಲಿ ರುಚಿಯ ಹಾಡ್ಯಾರ॥

ಬಸವಣ್ಣನವರು ಬಿಜ್ಜಳನ ಅರಮನೆಯಲ್ಲಿ ಆತನ ಮುಂದೆ ಚೆನ್ನಯ್ಯನವರ ಅಂಬಲಿ ಮಹಿಮೆಯನ್ನು ಹೊಗಳಿದಾಗ, ಅಲ್ಲಿದ್ದ ಕೊಂಡೆಮಂಚಣ್ಣರು ಹಾಸ್ಯಗೈಯುತ್ತಾ ಬಿಜ್ಜಳನಿಗೆ ಪರೀಕ್ಷಿಸಲು ತಿಳಿಸುತ್ತಾರೆ. ಬಿಜ್ಜಳ ತನ್ನ ಜನರನ್ನು ಚನ್ನಯ್ಯನ ಹತ್ತಿರ ಹೋಗಿ ಅಂಬಲಿ ತರಲು ಕಳುಹಿಸುತ್ತಾನೆ. ಆದರೆ ಚನ್ನಯ್ಯನವರು "ಭವಿಗ್ಯಾಕ ಅಂಬಲಿ" ಎಂದು ಕೇಳಿ

ನಂಬಿದ ಭಕುತರಿಗಿ ಹಂಬಲದ ಅಂಬಲಿ
ನಂಬದಾ ಭವಿಗಿ ಅಂಬಲಿ । ಕೊಟ್ಟರ
ಸಾಂಬಗ ದ್ರೋಹ ಬಗೆದ್ಹಾಂಗ ॥

ಭವಿಗಳಿಗೆ ಅಂಬಲಿ ಕೊಡುವುದಿಲ್ಲವೆನ್ನುತ್ತಾನೆ. ಸಿಟ್ಟಿಗೇರಿದ ಆ ರಾಜಭಟರು ಒಲೆಯ ಮೇಲಿದ್ದ ಗಡಿಗೆಯನ್ನು ಜೋರಾಗಿ ಒದೆಯುತ್ತಾರೆ. ಅಷ್ಟೇ ಜೋರಾಗಿ ನೆಲಕ್ಕೆ ಬಿದ್ದು ಉರಿ, ಉರಿ ಎಂದು ಚೀರಲು ಪ್ರಾರಂಭಿಸುತ್ತಾರೆ. ಅಷ್ಟೇ ಅಲ್ಲ ಆ ಗಡಿಯಲ್ಲಿಯ ಅಂಬಲಿ ಹರಿಯಲು ಪ್ರಾರಂಭಿಸುತ್ತದೆ. ವಿಷಯ ತಿಳಿದು ಬಸವಣ್ಣನವರು ಬಿಜ್ಜಳನಿಗೆ ಚನ್ನಯಯ್ಯನಲ್ಲಿಗೆ ಹೋಗಿ ಕ್ಷಮೆ ಕೇಳಲು ತಿಳಿಸುತ್ತಾರೆ ಇಲ್ಲದಿದ್ದರೆ. ಆ ಹರಿಯುವಿಕೆ ನಿಲ್ಲದೆ ಪ್ರಳಯವಾಗುತ್ತದೆ. ಎಂದು ಹೇಳಿದಾಗ ಬಿಜ್ಜಳ ಅರಸ ಓಡಿಬಂದು ಚನ್ನಯ್ಯನವರ ಪಾದವಿಡಿದು ಕ್ಷಮೆ ಕೇಳುತ್ತಾನೆ. ಅಂಬಲಿಯ ಗಡಿಗೆಗೆ ಕೂಡ ಭಕ್ತಿಯಿಂದ ನಮಿಸುತ್ತಾನೆ. ಆ ರಾಜಭಟ್ಟರಿಗೂ ನಮಿಸಲು ತಿಳಿಸುತ್ತಾನೆ. ಆಗ ಅವರ ಕಾಲಿನುರಿ ನಿಲ್ಲುವದಲ್ಲದೆ ಅಂಬಲಿ ಹರಿಯುವುದು ನಿಲ್ಲುತ್ತದೆ. ಆ ಹರಿದ ಅಂಬಲಿಯ ಸ್ಥಳವೆ ಅಂಬಲಿಗುಂಡವಾಗಿದೆಯಂಬುದು ಜನಪದ ಹಾಡುಗಳಿಂದ ತಿಳಿದು ಬರುತ್ತದೆ. ಇವತ್ತಿಗೂ ಕಲ್ಯಾಣಭಾಗದ ಜನರು ಆ ಸ್ಥಳಕ್ಕೆ ಅಂಬಲಿಕುಂಡ ಯಂಬುಲ ಕುಂಡ, ಎಂದೇ ಕರೆಯುತ್ತಾರೆ. ಹೀಗೆ ಐತಿಹಾಸಿಕವಾಗಿ ಪ್ರಸಿದ್ಧವಾಗಿರುವ ಸ್ಥಳಕ್ಕೆ ಈಗ ಪೌರಾಣಿಕ ರೂಪ ಕೊಟ್ಟ ಅದರ ಮೂಲಕ್ಕೆ ಕೊಡಲಿಪೆಟ್ಟು ಹಾಕುವ ಪ್ರಯತ್ನ ಮಾಡಲಾಗಿದೆ.

ವಿಶಾಲವಾದ ಈ ಸ್ಥಳವು ನಿಸರ್ಗದ ಮಡಿಲಿನಲ್ಲಿದ್ದು ಧ್ಯಾನ ತಪಸ್ಸಿಗೆ ಯೋಗ್ಯ ಸ್ಥಳವಾಗಿದೆ. ಇಲ್ಲಿ ಈಗ ಒಂದು ದೇವಾಲಯವನ್ನು ಕಟ್ಟಿ ಒಳಗೆ ರಾಮನ ಮೂರ್ತಿಯೊಂದನ್ನು ಇಟ್ಟಿದ್ದಾರೆ. ಮಹಾಶಿವಶರಣರಾಗಿರುವ ಚನ್ನಯ್ಯನವರು ವಚನಕಾರರು ಹೌದು. ಅವರ ಅಂಕಿತನಾಮ "ಅರಿನಿಜಾತ್ಮರಾಮರಾಮನ" ಎಂದಾಗಿರುವುದು ಇಲ್ಲಿ ಗಮನಿಸುವಂತಹದಾಗಿದೆ.

ಕಲ್ಯಾಣಕ್ಕೆ ಬಂದ ಮಾದಾರ ಚನ್ನಯ್ಯನವರು ವಚನಗಳನ್ನು ಕೂಡ ರಚಿಸಿದ್ದಾರೆ. ಬಹುಶಃ ಅವರು ಕಲ್ಯಾಣದಲ್ಲಿಯೆ ಲಿಂಗೈಕ್ಯರಾಗಿದ್ದಾರೆ. ಅಂಬಲಿಕುಂಡದ ಮಗ್ಗಲಿನಲ್ಲಿಯೆ ಒಂದು ಸಮಾಧಿಯಿದ್ದು ಅದೇ ಬಹುಶಃ ಮಾದಾರ ಚನ್ನಯ್ಯನವರದಾಗಿರಬಹುದೆಂಬ ಅನುಮಾನ ಬರುವುದು.

ಈ ಗವಿಯ ಮೇಲ್‌ಭಾಗದಲ್ಲಿ ಇನ್ನೊಂದು ಗವಿಯಿದ್ದು ಅದು ಸೀತಾ ನಹಾನಿ ಎಂದು ಕರೆಯುತ್ತಾರೆ. ಬಹುಶಃ ಅದು ಚೆನ್ನಯ್ಯನವರ ಮಡದಿ ಗಂಗಮ್ಮನವರ ಶಿವಯೋಗದ ಗವಿ ಆಗಿರಬಹುದೆಂದು ತೋರುತ್ತದೆ.

**ಅಡಿಟಿಪ್ಪಣಿಗಳು**

೧) ಶಿವಶರಣೆಯರ ವಚನ ಸಂಪುಟ ಸಂ. ಡಾ. ವೀರಣ್ಣರಾಜುರು ಪುಟ.೨೩೩ ವ.೧೩
೨) ಚ.ಬ.ವ. ಸಂ. ಡಾ. ಆರ್.ಸಿ. ಹಿರೇಮಠ ಪುಟ. ೧೫೨ ವಚನ.೩೪೫.
೩) ಹರಿಹರನ ರಗಳೆಗಳು ಸಂ. ಡಾ. ಫ.ಗು.ಹಳಕಟ್ಟಿ ಪುಟ.೪೧೨.
೪) ಸಂ.ವ. ಸಂಪುಟ. ಸಂ.ಡಾ. ಬಿ.ಆರ್.ಹಿರೇಮಠ ಪುಟ.೫೪ ವಚನ.೧೨೮.
೫) ಶಿವಶರಣೆಯರ ವಚನ ಸಂಪುಟ ಸಂ. ಡಾ. ವೀರಣ್ಣರಾಜುರು ಪುಟ.೨೨೫ ವಚನ.೭೦೦.
೬) ಬಸವಣ್ಣನವರ ವಚನ ಸಂಪುಟ ಸಂ. ಡಾ. ಎಂ.ಎಂ.ಕಲಬುರ್ಗಿ ಪುಟ.೮೩ ವಚನ.೩೪೪.
೭) ಶಿವಶರಣೆಯರ ವಚನ ಸಂಪುಟ ಡಾ. ವೀರಣ್ಣರಾಜುರು ಪುಟ.೬ ವಚನ.೧೫.
೮) ಹರಿಹರನ ರಗಳೆಗಳು ಸಂ. ಡಾ. ಎಂ.ಎಂ.ಕಲಬುರ್ಗಿ ಪುಟ. ೩೨೮ ಸ್ಥಲ.೧೧.
೯) ಶರಣ ಲೀಲಾಮೃತ ಸಂ. ಶಿವಬಸವ ಸ್ವಾಮಿ ಪುಟ.೨೪೯.
೧೦) ಗಿರಿಕೋಗಿಲೆ ಸಂ. ಡಾ. ನೀಲಾಂಬಿಕಾ ಪೋಲಿಸ್‌ಪಾಟೀಲ ಪುಟ.೧೯೮ ಪದ್ಯ.೧೩೯.
೧೧) ಶಿವಾನುಭವ ಪತ್ರಿಕೆ ಸಂಪುಟ.೪ ಸಂಚಿಕೆ.೩.
೧೨) ವೀರಶೈವ ಸಾಹಿತ್ಯ ಸಮಿಕ್ಷೆ ಸಂ. ಸದಾನಂದ ಕನವಳ್ಳಿ ಪುಟ.೧೫
೧೩) ವೀರಶೈವ ಸಾಹಿತ್ಯ ಸಮಿಕ್ಷೆ ಸಂ. ಸದಾನಂದ ಕನವಳ್ಳಿ ಪುಟ.೪೨
೧೪) ಶ್ರೀ ಬಸವೇಶ್ವರರು ಪುಟ.೨೧೬
೧೫) ಬಯಲುಗಳಿಕೆಯ ಬೆಳಗು. ಜೋಳದ ರಾಶಿ ದೊಡ್ಡನ ಗೌಡ ಪುಟ.೪೯೬
೧೬) ಸಂ. ವ.ಸಂಪುಟ.೧ ಸಂ.ಡಾ.ಎಂ.ಎಂ.ಕಲಬುರ್ಗಿ ಪುಟ.೫.
೧೭) ಸಂ. ವ. ಸಂಪುಟ.೨ ಡಾ. ಎಸ್.ವಿದ್ಯಾಶಂಕರ.
೧೮) ಸಿದ್ಧರಾಮೇಶ್ವರರ ವಚನಗಳು ಸಂ.ಡಾ.ಎಸ್.ವಿದ್ಯಾಶಂಕರ ಪುಟ.೩೦೫ ವಚನ.೧೦೭೬.
೧೯) ಬಯಲುಗಳಿಕೆಯ ಬೆಳಗು. ಜೋಳದ ರಾಶಿ ದೊಡ್ಡನ ಗೌಡ ಪುಟ.೨೦೧.
೨೦) ಬಯಲುಗಳಿಕೆಯ ಬೆಳಗು. ಜೋಳದ ರಾಶಿ ದೊಡ್ಡನ ಗೌಡ ಪುಟ.೧೯೮–೯೯.
೨೧) ಗೂಳುರು ಸಿದ್ಧವೀರಣ್ಣೊಡೆಯರ ಶೂನ್ಯ ಸಂಪಾದನೆ ಪ್ರೊ. ಭೂಸನೂರ ಮಠ ಪುಟ.೭೭೭
೨೨) ಬಸವಪಥ ಸಂಚಿಕೆ ನವೆಂಬರ್ ೨೦೦೩.
೨೩) ಗಿರಿಕೋಗಿಲೆ ಸಂ. ಡಾ. ನೀಲಾಂಬಿಕಾ ಪೋಲಿಸ್‌ಪಾಟೀಲ ಪುಟ.೩೩೨ ಪದ್ಯ.೧೮೯.
೨೪) ಸಂ. ವ. ಸಂಪುಟ.೨ ಡಾ. ಎಸ್.ವಿದ್ಯಾಶಂಕರ ಪುಟ.೪೨೫. ವಚನ.೬.
೨೫) ಅವ್ವಾ ಕಾಡಾದಿ ಗೌರವ್ವ ಹಾಡಿದ ಹಾಡು ಸಂ. ಡಾ. ನೀಲಾಂಬಿಕಾ ಪೋಲಿಸ್‌ಪಾಟೀಲ ಪುಟ. ೧೯೯ ಪದ್ಯ. ೮೩
೨೬) ಹರಿಹರನ ರಗಳೆಗಳು ಸಂ.ಡಾ. ಎಂ.ಎಂ.ಕಲಬುರ್ಗಿ ಪುಟ.೨೯೭.
೨೭) ಬಸವೇಶ್ವರರ ಸಮಕಾಲಿನರು ಪುಟ.೩೦೬
೨೮) ಅಲ್ಲಮಪ್ರಭುಗಳ ವಚನ ಸಂಪುಟ ಸಂ. ಡಾ.ಬಿ.ವ್ಹಿ. ಮಲ್ಲಾಪುರೆ ವಚನ ೭೦೭.